**ದಿಃ 07-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1) ಪ್ರತಿವಾದಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡ ಕಾರಣ ನಾನು ದಾವೆ ಸಲ್ಲಿಸಿರುತ್ತೇನೆ. ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಜೊತೆ 1980 ರಲ್ಲಿ ಮದುವೆಯಾಗಿರುತ್ತೇನೆ ಎಂದರೆ ಸರಿಯಲ್ಲ. ಮದುವೆಯಾದನಂತರ ಪ್ರತಿವಾದಿ ನನ್ನ ಜೊತೆ ವೈವಾಹಿಕ ಜೀವನವನ್ನು ನಡೆಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ನನ್ನ ವೈವಾಹಿಕ ಜೀವನದಲ್ಲಿ ಸಿದ್ದಪ್ಪಾ ಎಂಬ ಮಗ ಜನಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ತವರು ಮನೆಯಿಂದ ಹಣ ತೆಗೆದುಕೊಂಡು ಬರುವಂತೆ ಕಿರುಕುಳ ನೀಡಿ, ಮನೆಯಿಂದ ಆಚೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

2) ಪ್ರತಿವಾದಿ ನನ್ನ ವಿರುದ್ಧ ಜೀವನಾಂಶ ಕೋರಿ Crl. Misc. 87/2015 ಅರ್ಜಿಯನ್ನು ಮಾನ್ಯ ಕೌಟುಬಿಕ ನ್ಯಾಯಾಲಯ, ಬೆಳಗಾವಿಯಲ್ಲಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನಗೆ ನ್ಯಾಯಾಲಯದಿಂದ ನೋಟಿಸ ಬಂದಿತ್ತು ಎಂದರೆ ಸರಿ, ಅದರಲ್ಲಿ ನಾನು ಹಾಜರಾಗಿರಲಿಲ್ಲ ಎಂದರೆ ಸರಿ. ಸದರಿ ಅರ್ಜಿಯಲ್ಲಿ ಪ್ರಸ್ತುತ ಪ್ರತಿವಾದಿಗೆ ಜೀವನಾಂಶ ನೀಡಬೇಕೆಂದು ಆದೇಶವಾಗಿರುತ್ತದೆ ಎಂದರೆ ಸರಿ. ಆ ಪ್ರಕಾರ ಪ್ರಸ್ತುತ ಪ್ರತಿವಾದಿ ಜೀವನಾಂಶ ವಸೂಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ

ಸರಿ. ಪ್ರತಿವಾದಿ ನನಗೆ ಸಂಬಧವಿಲ್ಲದ ಕಾರಣ ನಾನು ಜೀವನಾಂಶವನ್ನು ನೀಡಿರುವುದಿಲ್ಲ. ನಾನು ಜೀವನಾಂಶ ವಸೂಲಿ ಅರ್ಜಿಯಲ್ಲಿ ಎಂಟು ಬಾರಿ ಜೈಲಿಗೆ ಹೋಗಿ ಬಂದಿರುತ್ತೇನೆ. ಸದರಿ ಅರ್ಜಿಯ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದೆ. ಸದರಿ ಮೇಲ್ಮನವಿಯಲ್ಲಿ ಆದೇಶವಾಗಿರುವ ಬಗ್ಗೆ ನನಗೆ ಗೊತ್ತಿಲ್ಲ.

3) ಪ್ರತಿವಾದಿಗೆ ನನ್ನಿಂದ ಜನಿಸಲಾಗಿರುತ್ತಾನೆ ಎನ್ನುವ ಮಗ ಸಿದ್ದಪ್ಪನ ಶಾಲಾ ದಾಖಲಾತಿಗಳಲ್ಲಿ ತಂದೆ ಹೆಸರು ಗಂಗಪ್ಪಾ ಹುರಕಡ್ಲಿ ಎಂದು ದಾಖಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ಪ್ರತಿವಾದಿ ಖೊಟ್ಟಿಯಾಗಿ ಆಧಾರ ಕಾರ್ಡನ್ನು ಸೃಷ್ಟಿಸಿಕೊಂಡು ದಾಖಲು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ರೀತಿಯಾಗಿ ನಾನು ದಾವೆಗೆ ಅನುಕೂಲವಾಗುವಂತೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮಗ ಪ್ರಸ್ತುತ ಸೇನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-5 ನ್ನು ಪ್ರಸ್ತುತ ದಾವೆ ಸಲ್ಲಿಸಿದ ನಂತರ ಪಡೆದಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1,3,6,7 ಗಳನ್ನು ದಾವೆ ಸಲ್ಲಿಸಿದ ನಂತರ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ವಿರುದ್ಧ ಸಲ್ಲಿಸಿರುವ ಜೀವನಾಂಶ ಅರ್ಜಿಗಳಲ್ಲಿಯ ಆದೇಶದ ಪ್ರಕಾರ ಅವರಿಗೆ ಜೀವನಾಂಶ ವನ್ನು ನೀಡುವುದನ್ನು ತಪ್ಪಿಸಿಕೊಳ್ಳಲು ನಾನು ಪ್ರಸ್ತುತ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ಪತ್ನಿ ಇದ್ದರೂ ಸಹ, ಅವಳು ನನ್ನ ಪತ್ನಿ ಅಲ್ಲ ಎಂದು ಕೋರಿ ಸುಳ್ಳು ದಾವೆ

ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಪ್ರತಿವಾದಿಯ ಮಗ ಸಿದ್ದಪ್ಪಾ ನನ್ನ ವಿರುದ್ಧ ಪಾಲು ವಿಭಾಗ ದಾವೆಯನ್ನು ಸಲ್ಲಿಸಿರುತ್ತಾನೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ವಕೀಲರ ಮುಖಾಂತರ ಹಾಜರಾಗಿದ್ದು, ಅದು ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ದಾವೆಗೆ ಅನುಕೂಲವಾಗುವಂತೆ ಸುಳ್ಳು ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.& ನ್ಯಾದಂ., ಗೋಕಾಕ